CW.1 PW.1

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ

CC No. 1494/2017

| | |
|---|---|
| ಸಾಕ್ಷಿದಾರರ ಹೆಸರು | ವೀರಭದ್ರ ವಿ.ಕೆ |
| ತಂದೆಯ ಹೆಸರು | ಕರಿಯಪ್ಪ |
| ವಯಸ್ಸು | 33 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ಟಿ.ಬನ್ನಿಕುಪ್ಪೆ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 04.10.2024. |

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-

ನನಗೆ ಚಾಸಾ-2 ರಿಂದ ಚಾಸಾ-6 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ.

ದಿಃ08.09.2017 ರಂದು ಟಿ.ಬನ್ನಿಕುಪ್ಪೆಯಿಂದ ಕನಕಪುರದ ಕಡೆಗೆ ನನ್ನ ತಂಗಿಯಾದ ಚಾಸಾ-2 ರವರು ಚಾಸಾ-3 ರವರೊಂದಿಗೆ ತಮ್ಮ ದ್ವಿಚಕ್ರ ವಾಹನ ಹೊಂಡಾ ಆಕ್ಟೀವಾ ಸಂಖ್ಯೆ ಕೆಎ-42-ಡಬ್ಲ್ಯೂ-1339 ರಲ್ಲಿ ಬೆಳಿಗ್ಗೆ 10.15 ರ ಸುಮಾರಿಗೆ ಬರುತ್ತಿರುವಾಗ ತುಂಗಣಿ ಬಳಿ ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ ಕೆಎ-42-ಎಫ್-610 ರ ಬಸ್ಸಿನ ಚಾಲಕನಾದ ಸುರೇಶ್ ಎನ್ನುವವರು ಬಸ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-2 ರವರ ದ್ವಿಚಕ್ರ ವಾಹನದ ಮುಂಭಾಗಕ್ಕೆ ಡಿಕ್ಕಿ ಪಡಿಸಿರುತ್ತಾರೆ. ಬಸ್ ಚಾಲಕನು ತನ್ನ ಬಸ್ ನ್ನು ನಿಲ್ಲಿಸದೆ ಹೋಗಿರುತ್ತಾರೆ. ಆಗ ಸಾರ್ವಜನಿಕರು ಅವರನ್ನು ಹಿಡಿದು ಪೋಲೀಸ್ ಠಾಣೆಗೆ ಬಸ್ ನ್ನು ತೆಗೆದುಕೊಂಡು ಹೋಗಿರುತ್ತಾರೆ. ಈ ರೀತಿ ದ್ವಿಚಕ್ರ ವಾಹನಕ್ಕೆ ಬಸ್ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ-3 ರವರ ತಲೆಗೆ ಪೆಟ್ಟಾಗಿ ರಕ್ತ ಬರುತ್ತಿತ್ತು ಮತ್ತು ಅವರ ದೇಹದ ಇತರ ಭಾಗಗಳಿಗೆ ಗಾಯಗಳಾಗಿದ್ದವು ಮತ್ತು ಅವರು ಸ್ಥಳದಲ್ಲಿಯೇ ಪ್ರಜ್ಞೆ ತಪ್ಪಿದ್ದರು. ನಂತರ

ಚಾಸಾ-2 ರವರು ಸಾರ್ವಜನಿಕರ ಸಹಾಯದೊಂದಿಗೆ ಚಾಸಾ-3 ರವರನ್ನು ಕನಕಪುರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿದ್ದರು. ನಂತರ ಚಾಸಾ-2 ರವರು ನನಗೆ ಅಪಘಾತದ ಬಗ್ಗೆ ಫೋನ್ ಮಾಡಿ ತಿಳಿಸಿರುತ್ತಾರೆ. ನಂತರ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿ ಈ ಬಗ್ಗೆ ವಿಚಾರ ಮಾಡಿದಾಗ ಚಾಸಾ-2 ರವರು ನನಗೆ ನಡೆದ ಘಟನೆ ಬಗ್ಗೆ ವಿವರಿಸಿರುತ್ತಾರೆ. ನಂತರ ನಾನು ಅಪಘಾತದ ವಿಚಾರಕ್ಕೆ ಸಂಬಂಧಿಸಿದಂತೆ ಬಸ್ ಚಾಲಕನ ವಿರುದ್ದ ದೂರು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸುತ್ತಾರೆ. ಅದು ದೂರು ಆಗಿದ್ದು, ಅದನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ಪಡೆದ ನಂತರ ಪೋಲೀಸರು ಅದೇ ದಿನ ನನ್ನನ್ನು 4.30 ರಿಂದ 5.00 ಗಂಟೆ ಸುಮಾರಿಗೆ ಅಪಘಾತದ ಸ್ದಳಕ್ಕೆ ಕರೆದುಕೊಂಡು ಹೋಗಿ ನನ್ನ ಸಮಕ್ಷಮ ಸ್ದಳ ಪಂಚನಾಮೆ ಮಾಡಿ ಅಪಘಾತಕ್ಕೆ ಒಳಗಾದ ದ್ವಿಚಕ್ರ ವಾಹನವನ್ನು ನನ್ನ ಸಮಕ್ಷಮ ಅಮಾನತು ಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಯು ಕೃತ್ಯ ಸ್ದಳ ಮಹಜರ್ ಆಗಿದ್ದು, ಅದನ್ನು ನಿಪಿ-2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನಿಪಿ-2 ಅಡಿಯಲ್ಲಿ ಅಮಾನತು ಪಡಿಸಿಕೊಂಡ ದ್ವಿಚಕ್ರ ವಾಹನವನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದ್ವಿಚಕ್ರ ವಾಹನ ಇರುವ ಮೂರು ಪೊಟೋಗಳನ್ನು ಕಡತದಲ್ಲಿ ನೋಡಿ ಗುರುತಿಸುತ್ತಾರೆ. ಪೊಟೋಗಳಿಗೆ ಸಂಬಂಧಿಸಿದಂತೆ ಸಿಡಿಯನ್ನು ಹಾಜರು ಪಡಿಸದೇ ಇರುವ ಕಾರಣ ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಿರುವುದಿಲ್ಲ.

ಅಪಘಾತ ಪಡಿಸಿದ ಬಸ್ ಚಾಲಕನನ್ನು ನಾನು ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ನಾನು ಪೋಲೀಸ್ ಠಾಣೆಯಲ್ಲಿ ನೋಡಿದ ವ್ಯಕ್ತಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಆಗಿರುತ್ತಾನೆ.

ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದ ಃ-

ಚಾಸಾ-2 ನನ್ನ ತಂಗಿ ಚಾಸಾ-3 ನನ್ನ ತಾಯಿ ಎಂದರೆ ಸರಿ. ಆ ದಿನ ನನ್ನ ತಂಗಿ ನಮ್ಮ ಊರನ್ನು ಬೆಳಿಗ್ಗೆ 9.45 ಗಂಟೆಗೆ ಬಿಟ್ಟಿರುತ್ತಾರೆ. ಚಾಸಾ-2 ರವರಿಗೆ ವಾಹನಗಳನ್ನು ಚಾಲನೆ ಮಾಡಲು ಯಾವುದೇ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರ ವಾಹನ ಚಾಲನಾ ಪತ್ರವನ್ನು ವಿಚಾರಣೆ ಕಾಲದಲ್ಲಿ ನಾವು ಹಾಜರುಪಡಿಸಿರುತ್ತೇವೆ. ನನಗೆ ಅಪಘಾತದ ಬಗ್ಗೆ ಆ ದಿನ 12 ಗಂಟೆಗೆ ಗೊತ್ತಾಗಿರುತ್ತದೆ. ಚಾಸಾ-2 ರವರು ನನಗೆ ಫೋನ್ ಮಾಡಿದಾಗ ನಾನು ಊರಿನಲ್ಲಿದ್ದೆ. ಅಪಘಾತವು 10.15 ಕ್ಕೆ ಆಗಿತ್ತು. ಚಾಸಾ-2 ರವರು ನನಗೆ ಫೋನ್ ಮಾಡಿದಾಗ ಅವರು ಆಸ್ಪತ್ರೆಯಲ್ಲಿದ್ದರು. ನಾನು ಚಾಸಾ-3 ರವರನ್ನು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿಲ್ಲ.

ನಮ್ಮ ಊರಿಂದ ಕನಕಪುರ ಆಸ್ಪತ್ರೆಗೆ ಬರಲು 20 ನಿಮಿಷ ಬೇಕಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 30 ನಿಮಿಷ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಾನು ನನಗೆ ಘಟನೆಯ ಬಗ್ಗೆ ತಿಳಿದ ನಂತರ ಆ ದಿನ 1.15-1.20 ಕ್ಕೆ ಬಂದಿರುತ್ತೇನೆ. ನಾನು ಆಸ್ಪತ್ರೆಗೆ ಹೋಗುವಷ್ಟರಲ್ಲಿ ಚಾಸಾ-2 ಮತ್ತು ಚಾಸಾ-3 ರವರು ಆಸ್ಪತ್ರೆಯಲ್ಲಿದ್ದರು ಎಂದರೆ ಸರಿ. ಚಾಸಾ-2 ಮತ್ತು ಚಾಸಾ-3 ರವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಕೊಡುತ್ತಿದ್ದರು. ಆಸ್ಪತ್ರೆಯಿಂದ ಪೋಲೀಸ್ ಠಾಣೆಗೆ 5 ನಿಮಿಷದಲ್ಲಿ ಹೋಗಬಹುದು ಎಂದರೆ ಸರಿ. ನಾನು ವಿಚಾರ ತಿಳಿದ ನಂತರ ತಕ್ಷಣವೇ 1.30 ಕ್ಕೆ ಹೋಗಿ ದೂರು ಕೊಟ್ಟಿರುತ್ತೇನೆ. ನಾನು ದೂರನ್ನು 1.30 ಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಿಪಿ-1 ನ್ನು ಪೋಲೀಸರು ನಾನು ಹೇಳಿದಂತೆ ಟೈಪ್ ಮಾಡಿರುತ್ತಾರೆ. ಆ ದಿನ ಬಸ್ ನ್ನು ಸಾರ್ವಜನಿಕರು ತಡೆದು ನಿಲ್ಲಿಸಿದರು ಎಂಬ ವಿಚಾರವನ್ನು ನಿಪಿ-1 ರಲ್ಲಿ ಹೇಳಿ ಬರೆಸಿಲ್ಲ

ಎಂದರೆ ಸರಿ. ಆ ದಿನ ಚಾಸಾ-2 ರವರು ಹೆಲ್ಮೆಟ್ ನ್ನು ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆದಿದೆ ಎಂದು ಹೇಳುವ ಸ್ದಳದಲ್ಲಿ ಒಂದೇ ರಸ್ತೆ ಇದೆ ಎಂದರೆ ಸರಿ. ಅಪಘಾತವಾದ ಸ್ದಳದಲ್ಲಿ ಸಾಮಾನ್ಯವಾಗಿ ಬಹಳಷ್ಟು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಚಾಸಾ-2 ರವರಿಗೆ ವಾಹನ ಚಾಲನೆ ಮಾಡಲು ಸರಿಯಾಗಿ ಬರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರು ರಸ್ತೆ ಮತ್ತು ಪುಟ್ ಬಾತ್ ಮಧ್ಯದಲ್ಲಿರುವ ಗುಂಡಿಗೆ ಬಿದ್ದಿರುತ್ತಾರೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ ಚಾಸಾ-2 ರವರ ವಾಹನಕ್ಕೆ ಡಿಕ್ಕಿ ಪಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರು ತಮ್ಮ ತಪ್ಪಿನಿಂದ ವಾಹನದೊಂದಿಗೆ ಬಿದ್ದಿರುವ ವಿಚಾರ ಗೊತ್ತಿದ್ದರೂ ಪರಿಹಾರ ಪಡೆಯಲು ಪೋಲೀಸರೊಂದಿಗೆ ಶಾಮೀಲಾಗಿ ಕೆ ಎಸ್ ಆರ್ ಟಿ ಸಿ ಬಸ್ ನ ವಿರುದ್ದ ಸುಳ್ಳು ಕೇಸು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ-2 ನ್ನು ಠಾಣೆಯಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ನ್ನು ಸ್ದಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ದಳದ ಪೂರ್ವಕ್ಕೆ ಜಮೀನುಗಳು ಬರುತ್ತವೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ರಸ್ತೆ ಬರುತ್ತದೆ. ಆ ದಿನ ನಿಪಿ-2 ಕ್ಕೆ ನನ್ನೊಂದಿಗೆ ಕೆಂಪೇಗೌಡ ಮತ್ತು ರವಿ ಎನ್ನುವವರು ಸಹಿ ಮಾಡಿರುತ್ತಾರೆ. ಆ ದಿನ ದ್ವಿಚಕ್ರ ವಾಹನವನ್ನು ಹೊರತು ಪಡಿಸಿ ನನ್ನ ಸಮಕ್ಷಮ ಬೇರೆ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿ. ಆ ದಿನ ಹೆಲ್ಮೆಟ್ ರಸ್ತೆಯಲ್ಲಿಯೇ ಬಿದ್ದಿತ್ತು ಅದನ್ನು ಪೋಲೀಸರು ವಶಪಡಿಸಿಕೊಂಡಿಲ್ಲ. ನಿಪಿ-2 ನ್ನು ಸ್ದಳದಲ್ಲಿ ತಯಾರಿಸದೇ ಇದ್ದರು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯನ್ನು ಈ ಮೊದಲು ನಾನು ಎಲ್ಲಿಯೂ ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆಂದರೆ ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ. ಓ ಹೇ ಕೇ ಸರಿ ಇದೆ

(ರಾಧಾ ಎಸ್.)
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ.